**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 08/2022 |
| ಸಿ.ಡಬ್ಲೂ | : 06 |
| ಪಿ.ಡಬ್ಲೂ | : 06 |
| ಸಾಕ್ಷಿಯ ಹೆಸರು | : ಮುನೀರಾ ಯುಸೂಫಸಾಬ ಇಂಜೀನಿಯರ |
| ವಯಸ್ಸು | : 45 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ನವಲಗುಂದ |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 29.11.2025.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯ ಇದೆ. ಚಾಸಾ-1, 2, 4, 5 7 ಮತ್ತು 8 ನನ್ನ ಸಂಬಂಧಿಕರು. ಚಾಸಾ-9 ರವರ ಪರಿಚಯವಿಲ್ಲ.

ಈಗ ಅಂದಾಜು 8 ವರ್ಷಗಳ ಹಿಂದೆ ಚಾಸಾ-1 ರವರು ಆರೋಪಿತರ ಮನೆಯಲ್ಲಿ ಲಾವಣಿಯ ಆಧಾರದಲ್ಲಿದ್ದು, ಚಾಸಾ-1 ಹಾಗೂ ಆರೋಪಿತರು ಚಾಸಾ-1 ರವರು ವಾಸವಿದ್ದ ಮನೆಯ ಮುಂದೆ ಜಗಳವಾಡುತ್ತಿದ್ದು, ನಾನು ಸದರಿ ಜಗಳ ಬಿಡಿಸಲು ಹೋಗಿರುತ್ತೇನೆ. ನಾನು ಹೋಗುವಷ್ಟರಲ್ಲಿ ಜಗಳ ಮುಗಿದಿದ್ದು, ಯಾರು ಯಾರಿಗೆ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರಕರಣಕ್ಕೆ ಸಂಬಂಧಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ದಿಃ 25-10-2014 ರಂದು ಬೆ.08.00 ಗಂಟೆಗೆ ಆರೋಪಿತರು ಚಾಸಾ-1 ಮತ್ತು ಆಕೆಯ ಮಗಳಿಗೆ ಇನ್ನ ಹೆಚ್ಚಿನ ಹಣ ಕೊಡುವಂತೆ ಕೇಳಿ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. 1ನೇ ಆರೋಪಿ ಚಾಸಾ-4 ರವರಿಗೆ ಹೊಡೆಬಡೆ

ಮಾಡಿರುತ್ತಾರೆ ಎಂದರೆ ಸರಿ. ನಂತರ 2 ನೇ ಆರೋಪಿ ಚಾಸಾ-1 ರವರಿಗೆ ಕಟ್ಟಿಗೆಯಿಂದ ಹೊಡೆದಿರುತ್ತಾನೆ ಎಂದರೆ ಸರಿ. ಆಗ ಚಾಸಾ-1 ರವರ ಹಲ್ಲು ಕಿತ್ತಿ ರಕ್ತ ಬಂದಿರುತ್ತದೆ ಎಂದರೆ ಸರಿ. ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ 2 ನೇ ಆರೋಪಿ ಗದ್ದಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ. ನಂತರ ಸದರಿಯವರು ಕೆಳಗೆ ಬಿದ್ದಿರುತ್ತಾರೆ ಎಂದರೆ ಸರಿ. ನಂತರ ಚಾಸಾ-7 ರಿಂದ 9 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ನಂತರ ಆರೋಪಿತರು ಚಾಸಾ-1 ರವರಿಗೆ ಜೀವ ಬೆದರಿಕೆ ಹಾಕಿತ್ತಾರೆ ಎಂದರೆ ಸರಿ. ನಂತರ ಚಾಸಾ-1, 4 ಹಾಗೂ 5 ರವರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀಮತಿ ಡಿ ಕೆ ಟಿ ವಕೀಲರಿಂದಃ**

ಚಾಸಾ-1 ರವರು ನನ್ನ ಸಂಬಂಧಿಕರು ಎಂದರೆ ಸರಿ. ನನ್ನ ಹಾಗೂ ಸದರಿಯವರ ಮನೆ ದೂರವಿದೆ ಎಂದರೆ ಸಾಕ್ಷಿಯು ಹೊಂದಿಕೊಂಡು ಇದೆ ಎಂದು ನುಡಿದಿರುತ್ತಾರೆ. ಯಾರು ಯಾರಿಗೆ ಬೈದಿರುತ್ತಾರೆ ಹಾಗೂ ಹೊಡೆದಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಚಾಸಾ-1 ರವರು ನನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

2. 1 ನೇ ಆರೋಪಿಗೆ ಕಿವಿ ಕೇಳಿಸುವುದಿಲ್ಲ ಹಾಗೂ ಕಣ್ಣು ಕಾಣಿಸುವುದಿಲ್ಲ ಎಂದರೆ ಸರಿ. ಆರೋಪಿತರಿಂದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಹೊಡೆಬಡೆ ಮಾಡಿರುತ್ತಾರೆ, ಅವಾಚ್ಯವಾಗಿ ಬೈದಿರುತ್ತಾರೆ ಹಾಗೂ ಜೀವದ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**